

ಅದುರು ಬಾಲದ
ಕರಿಮಂಡೆ ಪೀಪಿ

ಅಲ್ಲೇ ದೂರದಲ್ಲಿ ಗಿಳಿಗಳು, ಗೊರವಂಕಗಳು ಗಲಾಟೆ ಮಾಡುತ್ತಿದ್ದವು. ಆಗಸದಲ್ಲಿ ಶಿಕ್ರಾ ಹಕ್ಕಿ ಶಿಕಾರಿಗಾಗಿ ಹಾರಾಡುತ್ತಿತ್ತು. ಛೇ... ಬಂದ ದಾರಿಗೆ ಸುಂಕವಿಲ್ಲವೆಂದು ತಿರುಗಿ ಹೊರಡುತ್ತಿರುವಾಗ, ಅಲ್ಲೇ ದೊಡ್ಡ ಬಂಡೆ ಮೇಲೊಂದು ಪುಟ್ಟ ಹಕ್ಕಿ ಕಂಡಿತು. ಅರೆ... ಬ್ಲಾಕ್ ರೆಡ್‌ಸ್ಟಾರ್ಟ್... ಬಾಲವನ್ನು ಅದುರಿಸುತ್ತಾ, ನೆಲವನ್ನೇ ನೋಡುತ್ತಾ, ನೆಲದ ಮೇಲಿನ ತರಗೆಲೆಗಳ ನಡುವಿದ್ದ ಹುಳುಗಳ ಮೇಲೆ ಎರಗಿ, ಹಿಡಿದು ತಿನ್ನುತ್ತಿತ್ತು.

ಕನ್ನಡದಲ್ಲಿ ಅದುರು ಬಾಲ, ಕಪೇಕ್ಷುಕ, ಕಪ್ಪು ಬುಂಡಿ, ಕರಿಮಂಡೆ ಪೀಪಿ ಎಂದು ಕರೆಯುವ ಈ ಹಕ್ಕಿಯ ಇಂಗ್ಲಿಷ್ ಹೆಸರು **Black Redstart**. ಪುಟ್ಟದಾದ ಈ ಹಕ್ಕಿಯ ತಲೆ, ಬೆನ್ನು, ಕುತ್ತಿಗೆ, ರೆಕ್ಕೆಗಳು ಕಡುನೀಲಿಗಪ್ಪು ಬಣ್ಣ. ಎದೆ, ಹೊಟ್ಟೆ, ಬಾಲದ ಕೆಳಭಾಗ ಕಂದು ಮಿಶ್ರಿತ ಕೇಸರಿ ಬಣ್ಣವಿರುತ್ತದೆ. ಹೆಣ್ಣು ಹಕ್ಕಿಯ ಮೇಲ್ಭಾಗ ಕಂದುಗೆಂಪು ಬಣ್ಣವಿದ್ದು, ಕೆಳಭಾಗ ಬೂದಿ ಬಣ್ಣಕ್ಕಿರುತ್ತದೆ. ಈ ಮೂರೂ ಹಕ್ಕಿಗಳು ಪಾಸ್ಸರಿಫಾರ್ಮಿಸ್ (**Passeriformes**) ಗಣದ ಮುಸಿಕ್ಯಾಪಿಡೇ (**Muscicapidae**) ಕುಟುಂಬಕ್ಕೆ ಸೇರಿದವು. ಹಿಮಾಲಯದಲ್ಲಿ ಮರಿ ಮಾಡುವ ಈ ಹಕ್ಕಿಗಳು ಚಳಿಗಾಲದಲ್ಲಿ ಇತ್ತ ವಲಸೆ ಬಂದುಬಿಡುತ್ತವೆ. ಕೋಟೆ ನಾಡಿಗೆ ಬಂದ ಹಿಮಾಲಯದ ಈ ಅತಿಥಿಗಳನ್ನು ಕಂಡು ಮನಸ್ಸು ಖುಷಿಯಿಂದ ಹಿಗ್ಗಿತು.

ಚಿತ್ರಗಳು: ಆಕರ್ಷಣ್

ಪ್ರತಿಕ್ರಿಯಿಸಿ: feedback@sudha.co.in

# ಮಾಗಡಿ ಕೆರೆಯಲ್ಲಿ ಬಾನಾಡಿಗಳ ಚಿತ್ತಾರ

■ ಡಾ. ಕರವೀರಪ್ರಭು ಕ್ಯಾಲಕೊಂಡ

'ಉತ್ತರ ಕರ್ನಾಟಕದ ರಂಗನತಿಟ್ಟು' ಎಂದೇ ಕರೆಸಿಕೊಳ್ಳುವ ಗದಗ ಜಿಲ್ಲೆಯ 'ಮಾಗಡಿ ಪಕ್ಷಿಧಾಮ'ದಲ್ಲೀಗ ಹಕ್ಕಿಗಳದ್ದೇ ಕಾರುಬಾರು. ದೇಶ ವಿದೇಶಗಳಿಂದ ಬಂದು ಠಿಕಾಣಿ ಹೂಡಿರುವ ಸಾವಿರಾರು ಪಕ್ಷಿಗಳು ಕೆರೆಗೆ ಜೀವಕಳೆಯನ್ನು ಮರಳಿಸಿವೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಮಾಗಡಿ ಗ್ರಾಮದ ಈ ಕೆರೆಯನ್ನು ಪಕ್ಷಿಗಳ ಸ್ವರ್ಗವೆಂದೇ ಕರೆಯಲಾಗುತ್ತದೆ. ಶಿರಹಟ್ಟಿಯಿಂದ 8 ಕಿ.ಮೀ., ಗದಗದಿಂದ 27 ಕಿ.ಮೀ. ದೂರದಲ್ಲಿರುವ ಈ ಕೆರೆಗೆ ಬರುವ ಬಗೆ ಬಗೆ ಪಕ್ಷಿಗಳ ಕಲರವವನ್ನು ಕೇಳಲು, ಅವುಗಳ ಅಂದಚಂದವನ್ನು ಸವಿಯಲು ದೂರದೂರುಗಳಿಂದ ಈ ಸಮಯದಲ್ಲಿ ಪಕ್ಷಿ ವೀಕ್ಷಕರು, ಹವ್ಯಾಸಿ ಛಾಯಾಗ್ರಾಹಕರು, ಶಾಲಾ ಮಕ್ಕಳು ಸೇರುತ್ತಾರೆ. ಸುಮಾರು 70 ಹೆಕ್ಟೇರ್ ವಿಸ್ತೀರ್ಣದ ಮಳೆಯಾಧಾರಿತ ಕೆರೆಯೇ ಪಕ್ಷಿಧಾಮವಾಗಿ ರೂಪುಗೊಂಡಿದೆ.

'ಪಕ್ಷಿಗಳ ಸ್ವರ್ಗ' ಮಾಗಡಿ ಕೆರೆಯಲ್ಲೀಗ ದೇಶ ವಿದೇಶಗಳಿಂದ ವಲಸೆ ಬಂದಿರುವ ಸಾವಿರಾರು ಹಕ್ಕಿಗಳ ಕಲರವ.

ಮಳೆಗಾಲ ಮುಗಿಯುತ್ತಿದ್ದಂತೆ, ಅಂದರೆ ಅಕ್ಟೋಬರ್ ಅಂತ್ಯದ ವೇಳೆಗೆ ದೇಶ ವಿದೇಶಗಳಿಂದ ವಿವಿಧ ಹಕ್ಕಿಗಳು ಬರಲು ಆರಂಭಿಸುತ್ತವೆ. ನವೆಂಬರ್ ತಿಂಗಳ ಎರಡನೇ ವಾರದ ಹೊತ್ತಿಗೆ ಸಂಪೂರ್ಣ ಕೆರೆಯನ್ನು ಆಶ್ರಯಿಸಿಕೊಂಡು ಠಿಕಾಣಿ ಹೂಡುತ್ತವೆ. ಗುಂಪು ಗುಂಪಾಗಿ ವಿಹರಿಸುವ ಬಣ್ಣ ಬಣ್ಣದ ಥರಾವರಿ ಹಕ್ಕಿಗಳು ನೀರಿನಲ್ಲಿ ಬಿಡಿಸಿದ ರಂಗೋಲಿಯಂತೆ ಕಣ್ಣಿಗೆ ಹಬ್ಬ ಉಂಟು ಮಾಡುತ್ತವೆ.

ಮಾಗಡಿ ಪಕ್ಷಿಧಾಮದಲ್ಲಿ ಸುಮಾರು 166 ವಿವಿಧ ಜಾತಿಯ ಹಕ್ಕಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಸುಮಾರು 44 ಜಾತಿಯವು ವಿದೇಶಗಳಿಂದ ವಲಸೆ ಬರುವವು.

ಬೂದು ಹೆಬ್ಬಾತು (ಗ್ರೇಲಾಗ್ ಗೂಸ್), ಕಂದು ಬಾತು (ಬ್ರಾಹ್ಮಿಣಿ ಶೆಲ್ಡಕ್), ಸೂಜಿಬಾಲದ ಬಾತು (ನಾರ್ದರ್ನ್ ಪಿನ್ಟೇಲ್), ಚಲುಕ ಬಾತು (ನಾರ್ದರ್ನ್ ಷೋವೆಲರ್), ನಾಮದ ಬಾತು (ಯೂರೋಪಿಯನ್ ವಿಜನ್), ಬಿಳಿ ಹುಬ್ಬಿನ ಬಾತು (ಗಾರ್ಗನಿ), ಕಂದು ತಲೆ ಬಾತು (ಕಾಮನ್ ಪೊಚ್ಚರ್ಡ್) ಮುಂತಾದ ಬಾತುಗಳು ಇಲ್ಲಿ ಕಾಣಸಿಗುತ್ತವೆ.

ಬಾತುಗಳು ಮಾತ್ರವಲ್ಲ, ಹಲವು ಜಾತಿಯ ನೀರಕ್ಕಿ, ನೀರ್ನಡಿಗೆ, ನೆಲವಾಸಿ, ಮರವಾಸಿ ಹಕ್ಕಿಗಳನ್ನು ಹತ್ತಿರದಿಂದ ಕಾಣಬಹುದು. ಅಂದಾಜಿನ ಪ್ರಕಾರ ಪ್ರತಿ ವರ್ಷ ಮಾಗಡಿ ಕೆರೆಗೆ 10 ಸಾವಿರಕ್ಕೂ ಹೆಚ್ಚು ಪಕ್ಷಿಗಳು ವಲಸೆ ಬರುತ್ತವೆ.

ಜಮ್ಮು ಕಾಶ್ಮೀರದ ಲಡಾಕ್, ಲೇಹ್, ರಷ್ಯಾ, ಮಲೇಷ್ಯಾ, ಆಸ್ಟ್ರೇಲಿಯಾ, ಟಿಬೆಟ್, ಭೂತಾನ್, ಮ್ಯಾನ್ಮಾರ್, ನ್ಯೂಜಿಲೆಂಡ್, ಸೈಬೀರಿಯಾಗಳಿಂದ ವಲಸೆ ಬರುವ ಅಪರೂಪದ ಈ ವಿದೇಶಿ ಅತಿಥಿಗಳು ನವೆಂಬರ್ ತಿಂಗಳಲ್ಲಿ ಬಂದಿಳಿದು, ಫೆಬ್ರುವರಿ ಕೊನೆಗೆ ತಂತಮ್ಮ ದೇಶಗಳಿಗೆ ವಾಪಸ್ ಹೊರಟು ಬಿಡುತ್ತವೆ. 'ಕರ್ನಾಟಕದ ಜೀವವೈವಿಧ್ಯದ ಹಾಟ್‌ಸ್ಪಾಟ್' ಎಂದೂ ಈ ಪಕ್ಷಿಧಾಮ ಕರೆಸಿಕೊಂಡಿದೆ.

ಪ್ರತಿಕ್ರಿಯಿಸಿ: feedback@sudha.co.in

